

ಬಾನಂಗಳದಲ್ಲಿ ಹರಡಿಕೊಂಡಿದ್ದ ಮೇಘಮಾಲೆ. ಈ ಚೆಲುವನ್ನು ಕಿಟಕಿಯಿಂದ ಕಣ್ತುಂಬಿಕೊಳ್ಳುವುದಲ್ಲಿ ಮಗ್ನನಾಗಿರುವಾಗಲೇ, ಹಿಮಾಲಯದಲ್ಲೂ ಇದೇ ರೀತಿಯ ಹಿಮ ಹರಡಿಕೊಂಡಿರಬಹುದಲ್ಲ ಎನ್ನುವ ಮತ್ತೊಂದು ಕಲ್ಪನೆ. ಈ ಸ್ವಪ್ನಲಹರಿಯಲ್ಲೇ ನವದೆಹಲಿಯ ನೆಲವನ್ನು ವಿಮಾನ ಸ್ಪರ್ಶಿಸಿತು.

ಪುರಾನಾ ಡೆಲ್ಲಿ ರೈಲು ನಿಲ್ದಾಣದಿಂದ 'ರಾಣೀಖೇತ್' ರೈಲಿನಲ್ಲಿ ರಾತ್ರಿಯಿಡೀ ಪಯಣಿಸಿ ಬೆಳಿಗ್ಗೆ ಕಾಟ್‌ಗೋಡಾಮ್ ತಲುಪಿದೆ. ನಿಲ್ದಾಣಕ್ಕೆ ರೆಸಾರ್ಟ್‌ನವರು ಕಳಿಸಿದ್ದ ಮಿನಿಬಸ್ಸಿನಲ್ಲಿ ನೈನಿತಾಲ್, ರಾಣಿಖೇತ್, ಅಲ್ಮೋರಾ ಮುಖಾಂತರ ಕೌಸಾನಿಗೆ ಬಂದಿಳಿದ ನಮ್ಮನ್ನು ಸ್ವಾಗತಿಸಿದ್ದು ರೆಸಾರ್ಟ್‌ನ ಕಾರ್ಯನಿರ್ವಹಣಾಧಿಕಾರಿ ತ್ರೀಷ್ ಕಪೂರ್. ಪ್ರವೃತ್ತಿಯಿಂದ ಛಾಯಾಗ್ರಾಹಕರಾಗಿರುವ ಅವರು 'ಬುರಾಂಶ್ ರೆಸಾರ್ಟ್' ಅನ್ನು ಕಲಾತ್ಮಕವಾಗಿ ನಿರ್ಮಿಸಿದ್ದಾರೆ. ವರ್ಷಕ್ಕೊಮ್ಮೆ ಕೌಸಾನಿ ಹಳ್ಳಿಯ ಮಕ್ಕಳಿಗೆ ಛಾಯಾಚಿತ್ರ, ಕರಕುಶಲಕಲೆ, ಶಿಲ್ಪಕಲೆ, ಚಿತ್ರಕಲೆ, ನೃತ್ಯ, ಬರಹ ಹೀಗೆ ಹಲವಾರು ಕಾರ್ಯಾಗಾರಗಳನ್ನು ಉಚಿತವಾಗಿ ಆಯೋಜಿಸುತ್ತಾರೆ. ತ್ರೀಷ್ ಕಪೂರ್ ಅವರು ಚಳಿಗಾಲದಲ್ಲಿ ಚಿತ್ರಿಸಿದ ಹಿಮಾಲಯದ ಒಂದು ಚಿತ್ರ ಹಾಗೂ ನನ್ನೊಂದಿಗೆ ತೆಗೆದ ಚಿತ್ರಗಳು ಇಲ್ಲಿವೆ. ಹೊರಗಿನ ಕಲಾವಿದರ ಕಲಾಕೃತಿಗಳನ್ನು, ಛಾಯಾಚಿತ್ರಗಳನ್ನು ರೆಸಾರ್ಟ್‌ನಲ್ಲಿ ಗ್ರಾಹಕರಿಗೆ ಪ್ರದರ್ಶಿಸಿ, ಅವು ಮಾರಾಟವಾದರೆ ಕಲಾಕರ್ತೃಗಳಿಗೆ ಆ ಮೊತ್ತವನ್ನು ತಲುಪಿಸುವ ಔದಾರ್ಯ ಇವರದು.

## ಕೈ ಕೊಟ್ಟ ಹಿಮ!

ತ್ರೀಶ್ ಅವರು ನೀಡಿದ ತಂಪಾದ ಸ್ವಾಗತ ಪಾನೀಯ ಕುಡಿಯುತ್ತಿರುವಾಗ ನನ್ನೊಳಗೆ

